ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 122/2024**

ಪ್ರ.ವ.ಬೋ.ತಾಃ 03-06-2026

ಚಾಸಾಃ 4 ಫ್ರಾಸಾಃ 4

| | |
|---|---|
| ಸಾಕ್ಷಿಯ ಹೆಸರು | ಬಿ.ಹೆಚ್.ರಾಮಕೃಷ್ಣಾರೆಡ್ಡಿ |
| ತಂದೆ/ಗಂಡನ ಹೆಸರು | ಬಿ.ಎಂ.ಹನುಮಂತರೆಡ್ಡಿ |
| ವಯಸ್ಸು | 64 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಬೇಡತ್ತೂರು, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ದಿಃ 04.11.2024 ರಂದು ಬೇಡತ್ತೂರು ಗ್ರಾಮದ ರಾಮಚಂದ್ರಪ್ಪರವರ ಡಾಬಾದ ಹತ್ತಿರ ಮಧುಗಿರಿ-ಪಾವಗಡ ರಸ್ತೆಯಲ್ಲಿ ಅಪಘಾತಕ್ಕೆ ಸಂಬಂಧಪಟ್ಟಂತೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.5 ರವರು ಇದ್ದರು. ಅಪಘಾತವಾದ ವಿಚಾರವನ್ನು ಚಾಸಾ.1 ರವರು ತೋರಿಸಿದರು. ಆಗ ಸಮಯ ಬೆಳಗ್ಗೆ 9.00 ರಿಂದ 10.00 ಗಂಟೆ ಆಗಿತ್ತು. ಆ ಸಮಯದಲ್ಲಿ ಪೊಲೀಸರು ಹೊಡೆದ ಎರಡು ಹೆಲ್ಮೆಟ್‌ಗಳನ್ನು ಅಮಾನತ್ತುಪಡಿಸಿಕೊಂಡರು. ಈಗ ತೋರುತ್ತಿರುವ ಕಚ್ಚಾ ನಕ್ಷೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.3 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು

ನಿಪಿ.3(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಎರಡು ಫೋಟೋಗಳನ್ನು ತೆಗೆದರು. ಅವುಗಳನ್ನು ನಿಪಿ.4 ಮತ್ತು 5 ಎಂದು ಈಗಾಗಲೇ ಗುರುತಿಸಲಾಗಿದೆ. ಆ ದಿನ ಪೊಲೀಸರು ಅಮಾನತ್ತುಪಡಿಸಿಕೊಂಡ ಹೊಡೆದ ಎರಡು ಹೆಲ್ಮೆಟ್‌ಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಮು.ಮಾ.01 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ಬೆಳಗ್ಗೆ 10.45 ರಿಂದ 11.30 ಗಂಟೆಯವರೆಗೆ ಪೊಲೀಸರು ಮಿಡಿಗೇಶಿ ಠಾಣಾ ಆವರಣದಲ್ಲಿ ನನ್ನ ಮತ್ತು ಚಾಸಾ.5 ರವರ ಸಮಕ್ಷಮ ಅಮಾನತ್ತು ಪಂಚನಾಮೆ ಮಾಡಿ ಒಂದು ದ್ವಿಚಕ್ರ ವಾಹನ ಮತ್ತು ಒಂದು ಅಶೋಕ ಲೇಲ್ಯಾಂಡ್ ಲಾರಿಯನ್ನು ಅಮಾನತ್ತುಪಡಿಸಿಕೊಂಡರು. ಆ ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.6 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಒಂದು ಫೋಟೋ ತೆಗೆದರು. ಆ ಫೋಟೋವನ್ನು ನಿಪಿ.7 ಎಂದು ಈಗಾಗಲೇ ಗುರುತಿಸಲಾಗಿದೆ. ಆ ದಿನ ಅಮಾನತ್ತುಪಡಿಸಿಕೊಂಡ ದ್ವಿಚಕ್ರ ವಾಹನ ಮತ್ತು ಅಶೋಕ ಲೇಲ್ಯಾಂಡ್ ವಾಹನಗಳನ್ನು ನಿಪಿ.7 ರಂತಹ ಫೋಟೋದಲ್ಲಿ ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ– ಆರೋಪಿ ಪರವಾಗಿ ಶ್ರೀ. ಆರ್.ಆರ್. ವಕೀಲರಿಂದಃ–**

ಪೊಲೀಸರು ನೋಟೀಸ್ ಕೊಟ್ಟ ಮೇರೆಗೆ ನಾನು ಮತ್ತು ಚಾಸಾ.5 ರವರು ಒಟ್ಟಿಗೆ ಸ್ಥಳಕ್ಕೆ ಬಂದೆವು. ಆ ನೋಟೀಸನ್ನು ದಿಃ 03.11.2024 ರಂದು ನೀಡಿರುತ್ತಾರೆ. ಆ ಸ್ಥಳ ಪಂಚನಾಮೆಯ ಕಾಲಕ್ಕೆ ಸುಮಾರು 10 ರಿಂದ 15 ಜನ ಆ ಸ್ಥಳದಲ್ಲಿದ್ದರು. ಅಪಘಾತವಾದ ಸ್ಥಳದಲ್ಲಿ ಮುಖ್ಯ ರಸ್ತೆ ಇದ್ದು, ಜನರು ಮತ್ತು ವಾಹನಗಳು ಸಾಕಷ್ಟು ಓಡಾಡುತ್ತಿರುತ್ತವೆ ಎಂದರೆ

ಸರಿ. ನಾನು ಆ ದಿನ ಬೆಳಗ್ಗೆ 9.30 ಗಂಟೆಗೆ ಆ ಸ್ಥಳ ಪಂಚನಾಮೆಗೆ ಸಹಿ ಮಾಡಿದೆನು. ಆ ಸ್ಥಳ ಪಂಚನಾಮೆಯನ್ನು ಪೊಲೀಸರು ಸ್ಥಳದಲ್ಲಿಯೇ ಬರೆದರು. ನಂತರ ನಾನು ಮತ್ತು ಚಾಸಾ.5 ರವರು ದ್ವಿಚಕ್ರ ವಾಹನದ ಮಾಲಕ ಪೊಲೀಸ್ ಠಾಣೆಗೆ ಬಂದೆವು . ನಾವು ಠಾಣೆಗೆ ಹೋಗುವುದಕ್ಕಿಂತ ಮೊದಲೇ ಆ ಎರಡೂ ವಾಹನಗಳನ್ನು ಠಾಣೆಗೆ ತೆಗೆದುಕೊಂಡು ಬಂದಿದ್ದರು. ಆ ಎರಡೂ ವಾಹನಗಳನ್ನು ಅಪಘಾತವಾದ ಸ್ಥಳದಿಂದ ಠಾಣೆಗೆ ಯಾರು ತಂದರು ಎಂಬುದು ನನಗೆ ಗೊತ್ತಿಲ್ಲ. ದಿಃ 04.11.2024 ರಂದು ಆ ಎರಡೂ ವಾಹನಗಳನ್ನು ಠಾಣೆಗೆ ತೆಗೆದುಕೊಂಡು ಬಂದಿದ್ದರು. ಆ ಫೋಟೋಗಳನ್ನು ಯಾರು ತೆಗೆದರು ಎಂಬುದು ನನಗೆ ಗೊತ್ತಿಲ್ಲ. ಆ ದಿನ ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಯಾವುದೇ ಸ್ಥಳ ಪಂಚನಾಮೆ ಮಾಡಿಲ್ಲ, ಹೆಲ್ಮೆಟ್‌ಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ಸ್ಥಳ ಪಂಚನಾಮೆಗೆ ನಾನು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ. ಆ ಅಮಾನತ್ತು ಪಂಚನಾಮೆಯನ್ನು ಠಾಣೆಯಲ್ಲಿಯೇ ಬರೆದು ನನ್ನ ಸಹಿ ಪಡೆದರು. ನಾನು ಮತ್ತು ಚಾಸಾ.5 ರವರು ಸಂಬಂಧಿಕರಾಗಿದ್ದು, ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ